## **ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ಶೃಂಗೇರಿ**

**ಸಿ.ಸಿ.ನಂಃ275/2018**

**ಫಿರ್ಯಾದುದಾರರುಃ** ಶ್ರೀ. ಅಬ್ದುಲ್ ನಭಿ
ಬಿನ್ ಅಬ್ದುಲ್ ರೆಹಮಾನ್,
ವಯಸ್ಸು ಸುಮಾರು 40 ವರ್ಷ,
ವಾಸಃ ದುರ್ಗಾದೇವಸ್ಥಾನದ ಹತ್ತಿರ,
ಉಳುವಳ್ಳಿ ಗ್ರಾಮ, ತ್ಯಾವಣ ಅಂಚೆ,
ಶೃಂಗೇರಿ ತಾಲ್ಲೂಕು.

ಃ **ವಿರುದ್ಧ** ಃ

**ಆರೋಪಿಃ** ಶ್ರೀಮತಿ. ಶಮೀನಾ
ಕೋಂ. ಅಬ್ದುಲ್ ಹಮೀದ್
ವಯಸ್ಸು ಸುಮಾರು 35 ವರ್ಷ,
ವಾಸಃ ಮನೆ ನಂಃ 4-117, ಕೆಳಗಿನಮನೆ,
ಬೈಕಂಪಾಡಿ, ಬೈಕಂಪಾಡಿ ಅಂಚೆ,
ಮಂಗಳೂರು.

*****

## **ಆ ಪಾ ದ ನೆ**

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ನೀವು ಫಿರ್ಯಾದುದಾರರಿಂದ ನಿಮ್ಮ ತುರ್ತು ಅವಶ್ಯಕತೆಯ ಉದ್ದೇಶಕ್ಕಾಗಿ ರೂ.5,00,000/- ಗಳನ್ನು ದಿನಾಂಕಃ 15/04/2018 ರಂದು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಹಣವನ್ನು ಮರುಪಾವತಿ ಮಾಡುವುದಾಗಿ ಒಪ್ಪಿ, ಅದೇ ದಿನ ಆರೋಪಿಯಾದ ನೀವು ನಿಮ್ಮ ಉಳಿತಾಯ ಖಾತೆ ಹೊಂದಿರುವ ಕಾರ್ಪೊರೇಶನ್ ಬ್ಯಾಂಕ್ , ಬೈಕಂಪಾಡಿ ಶಾಖೆಯ ಚೆಕ್ ನಂಃ 536237 ನ್ನು ರೂ. 5,00,000/- ಗಳಿಗೆ ದಿನಾಂಕಃ 21/06/2018 ನೇ ದಿನಾಂಕವನ್ನು ನಮೂದಿಸಿ ಒಂದು ಚೆಕ್ಕನ್ನು ನೀಡಿ ನಗಧೀಕರಿಸಿಕೊಳ್ಳುವಂತೆ ತಿಳಿಸಿದ್ದು, ಸದರಿಯವರು ಕಾರ್ಪೊರೇಶನ್ ಬ್ಯಾಂಕ್, ಶೃಂಗೇರಿ ಶಾಖೆಗೆ ದಿನಾಂಕಃ 25/06/2018 ರಂದು ಚೆಕ್ಕನ್ನು ಜಮಾವಣೆಗಾಗಿ ಬ್ಯಾಂಕಿಗೆ ಹಾಜರುಪಡಿಸಿದಾಗ, ಬ್ಯಾಂಕಿನವರು FUNDS INSUFFICIENT ಎಂಬ ಹಿಂಬರಹದೊಂದಿಗೆ ವಾಪಸ್ಸು ಮಾಡಿದ್ದು , ತದನಂತರ ನಿಮ್ಮ ಮಾತಿನ ಮೇಲೆ ವಿಶ್ವಾಸವಿಟ್ಟು ದಿನಾಂಕಃ 25/07/2018 ರಂದು ಪುನಃ ಚೆಕ್ಕನ್ನು ನಗದೀಕರಣಕ್ಕೆ ಹಾಜರುಪಡಿಸಿದಾಗಲೂ FUND INSUFFICIENT ಎಂಬ ಹಿಂಬರಹದೊಂದಿಗೆ ಚೆಕ್ಕು ನಗದೀಕೃತಗೊಳ್ಳದೇ ವಾಪಸ್ಸಾಗಿದ್ದು, ಈ ಬಗ್ಗೆ ನಿಮಗೆ ವಕೀಲರ ಮೂಲಕ ದಿನಾಂಕಃ13/08/2018 ರಂದು ನೋಟಿಸನ್ನು ನೀಡಿದರೂ ಸಹ ನೀವು ಆರೋಪಿ ಸದರಿ ಸಾಲದ

ಹಣವನ್ನಾಗಲಿ ಅಥವಾ ಉತ್ತರವನ್ನಾಗಲಿ ನೀಡಿರುವುದಿಲ್ಲ. ಆದ್ದರಿಂದ ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೆಯ ಲಿಖಿತ ಕಾಯ್ದೆ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರಶ್ನೆ. 1 ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರ ಃ

ಪ್ರಶ್ನೆ.2 ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ ಃ 6 ನೇ ದಿವಸ ಮಾರ್ಚ್ ಮಾಹೆ 2021.

(ಸೂರ್ಯನಾರಾಯಣ ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಶೃಂಗೇರಿ.